ಸಾಕ್ಷಿಯನ್ನು ಈಹೊತ್ತು ದಿನಾಂಕ ಃ 09.07.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು .

ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀಮತಿ ಎಂ.ಯು.ಆರ್ ಫಾರ್ ಸಿ.ಎಸ್.ಆರ್ ವಕೀಲರಿಂದ ಃ

ಸರ್ವೆ ನಂ.127 ಎ. 2 ಎಕರೆ 11 ಗುಂಟೆ ಇದ್ದು, ಅದರಲ್ಲಿ 4 ಗುಂಟೆ ಕರಾಬು ಇರುತ್ತದೆ. ಸನ್ 1995 ರಲ್ಲಿ ಮೂರು ಸರ್ವೆ ನಂಬರ್ ಗಳಲ್ಲಿ ಅಣ್ಣ ತಮ್ಮಂದಿರು ಪಾಲು ಮಾಡಿಕೊಂಡ್ದರು ಎಂದರೆ ಸರಿಯಲ್ಲ. ಆದರೆ ಅನುಭವದಲ್ಲಿ ಇದ್ದರು. ಈ ಮೊದಲು ಪಾಲು ದಾವೆಯಲ್ಲಿ ನನಗೆ ಭಾಗ ಬಂದಿರುತ್ತದೆ. ಆ ದಾವೆಯಲ್ಲಿ ನನ್ನ ಅಣ್ಣ ತಮ್ಮಂದಿರು ನನ್ನನ್ನು ಬಿಟ್ಟು ಭಾಗ ಮಾಡಿಕೊಂಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪಹಣಿ ನನ್ನ ಹೆಸರಿನಲ್ಲಿ ಇದೆ. ನಿಪಿ-2 ಆರ್.ಟಿ.ಸಿ ಇರುತ್ತದೆ. ಸದರಿ ಆರ್.ಟಿ.ಸಿ ಯಲ್ಲಿ 1995 ರಲ್ಲಿ ಆದ ವಿಭಾಗ ಪ್ರಕಾರ ಹೆಸರುಗಳು ದಾಖಲೆಯಾಗಿದೆ ಎಂದರೆ ಸರಿ ಅದು ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಯು ಪಾಲು ದಾವೆಯಲ್ಲಿ ನಂತರ ನನಗೆ ಭಾಗ ಬಂದಿದೆ ಎಂದು ಹೇಳುತ್ತಾರೆ. ಪಾಲು ದಾವೆಯಲ್ಲಿ ಫೈನಲ್ ಡಿಕ್ರಿ ಆದ ನಂತರ ನನ್ನ ಹೆಸರು ಆರ್.ಟಿ.ಸಿಯಲ್ಲಿ ದಾಖಲಾಗಿದೆ ಅದನ್ನು ಹಾಜರು ಪಡಿಸಿಲ್ಲ. ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನಿಪಿ-2 ಆರ್.ಟಿ.ಸಿ 2014-15 ಸಾಲಿಗೆ ಸಂಬಂಧಿಸಿದಂತೆ ಎಂದರೆ ಸರಿ. ಅಣ್ಣ ತಮ್ಮಂದಿರ ಪೈಕಿ ಸ್ವಲ್ಪ ಜನ ಸರ್ವೆ ನಂ.127 ರಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ. ಗುರುವಾ ರೆಡ್ಡಿ 12 ಗುಂಟೆ ಜಮೀನನ್ನು ಅವರ ಅಣ್ಣನಿಗೆ ಮಾರಿಕೊಂಡಿರುತ್ತಾನೆ. ಅದೇ ತರಹ ಈ ಪ್ರತಿವಾದಿ 14 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು 9 ವರೆ ಗುಂಟೆಯಲ್ಲಿ ಇರುತ್ತೇನೆ ಎಂದು ಹೇಳುತ್ತಾರೆ.

2. ನಾನು 9 ವರೆ ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದ ಬಗ್ಗೆ ತೋರಿಸಲು ದಾಖಲೆ ಹಾಜರು ಪಡಿಸಿರುತ್ತೇನೆ. ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ, ಖಾತಾ, ಮ್ಯುಟೇಷನ್ ಅಥವಾ ಟ್ಯಾಕ್ಸ್ ಪೇಡ್ ರಶೀದಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆ ಹಾಜರು ಪಡಿಸಿಲ್ಲದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸರ್ವೆ ನಂ.127 ರಲ್ಲಿ ರಸ್ತೆ ಆಗಿರುತ್ತದೆ. ಪ್ರತಿವಾದಿಯ ಮನೆಯ ವರೆಗೆ ರಸ್ತೆ ಇರುವುದಿಲ್ಲ ನನ್ನ ಮನೆವರೆಗೆ ಆಗಿರುತ್ತದೆ.

ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .